ಇ. **ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಳೆದ 2-3- ವರ್ಷಗಳಿಂದ ಅಪಘಾತಗಳು ಹೆಚ್ಚಿರುವುದು.**

ಶ್ರೀ ಕೆ. ಜಯರಾಮಶೆಟ್ಟಿ (ಉಲ್ಲಾಳ):- ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 2-3 ವರ್ಷಗಳಿಂದ ಬಹಳಷ್ಟು ದೊಡ್ಡ ಪ್ರಮಾಣದಲ್ಲಿ ಅಪಘಾತಗಳು ಆಗುತ್ತವೆ. 1996 ರಲ್ಲಿ 303 ಅಪಘಾತಗಳಾಗಿವೆ. 337 ಜನ ಅದರಲ್ಲಿ ಸತ್ತಿದ್ದಾರೆ. 3021 ಜನ ಗಾಯಾಳುಗಳಾಗಿದ್ದಾರೆ. ಕಳೆದ ಒಂದು ತಿಂಗಳಿನಲ್ಲಿ ನ್ಯಾಷನಲ್ ಹೈವೇ 17 ರಲ್ಲಿ ನಲಪಾಡಿಯಿಂದ ಕುಂದಾಪುರ, ಹಾಗೂ ಬೊಂಬಾಯಿಗೆ ಹೋಗುವ ರಸ್ತೆಗಳಲ್ಲಿ ನಲಪಾಡಿ ಟು ಉಡುಪಿಯ ಒಳಗಡೆ 27 ಜನ ಸತ್ತಿದ್ದಾರೆ. ಇತ್ತೀಚಿನ ದಿವಸಗಳಲ್ಲಿ ಆಗಿಂದಾಗ್ಗೆ ವಾರಕ್ಕೊಂದು ಸಲ ಅಥವಾ ತಿಂಗಳಿಗೆ ಎರಡು ಮೂರು ಸಲ ಅಫಘಾತಗಳಾಗುತ್ತವೆ. ಈ ರೀತಿ ಬಹಳಷ್ಟು ದೊಡ್ಡ ಪ್ರಮಾಣದಲ್ಲೇನು ಅಪಘಾತಗಳಾಗುತ್ತವೆ ಸರಕಾರ ಇದನ್ನು ತಡೆಗಟ್ಟುವಲ್ಲಿ ಸರಕಾರವೇನು ಕ್ರಮಗಳನ್ನು ತೆಗೆದುಕೊಂಡಿದೆ ಎಂದು ತಿಳಿಸಬೇಕು. 8 ವರ್ಷಗಳ ಹಿಂದೆ ದಕ್ಷಿಣ ಕನ್ನಡ ಜಿಲ್ಲಾ ಪರಿಷತ್ತಿಗೆ ನಮ್ಮಲ್ಲಿನ 5 ರಾಷ್ಟ್ರೀಕೃತ ಬ್ಯಾಂಕುಗಳು ಸುಮಾರು 12 ಕೋಟಿ ರೂಪಾಯಿಗಳನ್ನು ರಸ್ತೆ ಅಭಿವೃದ್ಧಿಗೋಸ್ಕರ ಕೊಡುತ್ತೇವೆಂದು ಭರವಸೆ ಕೊಟ್ಟಿದ್ದರು. ಜಿಲ್ಲಾ ಪರಿಷತ್ ತಮ್ಮ ಗಮನಕ್ಕೆ ತಂದಿದೆ. ಮಲೆನಾಡು ಅಭಿವೃದ್ಧಿ ಯೋಜನೆಯಲ್ಲಿ ಅಥವಾ ಕೊಲ್ಲೂರು ಸುಬ್ರಮಣ್ಯ ಧರ್ಮಸ್ಥಳ ಕಡೆಗಳಲ್ಲಿ ಹೊಸದಾಗಿ ರಸ್ತೆ ರಚನೆ ಮಾಡಿದೆ ಈ ರೀತಿ ಅಪಘಾತಗಳಾಗುವುದನ್ನು ತಡೆಯಲಿಕ್ಕೆ ಸಾಧ್ಯತೆ ಉಂಟು. ರಸ್ತೆಗಳನ್ನು ದ್ವಿಮುಖ ಅಥವಾ ಚತುಷ್ಪತರಸ್ತೆಗಳನ್ನಾಗಿ ವ್ಯವಸ್ಥೆ ಮಾಡಿದರೆ, ಅಪಘಾತಗಳನ್ನು ನಿಯಂತ್ರಣ ಮಾಡಲಿಕ್ಕೆ ಸಾಧ್ಯತೆ ಉಂಟು. ಅಥವಾ ಎಕ್ಸ್‌ಪ್ರೆಸ್ ಬಸ್‌ಗಳಿಗೆ ವೇಗ ತಡೆಗವರ್ನರ್‌ನ್ನು ಅಳವಡಿಸಿಕೊಂಡರೆ ರಸ್ತೆ ಅಪಘಾತಗಳನ್ನು ತಡೆಯಲಿಕ್ಕೆ ಸಾಧ್ಯತೆ ಉಂಟು. ಟ್ರಾಫಿಕ್ ರೂಲ್ ಅನ್ನು ಕಡ್ಡಾಯವಾಗಿ ಪಾಲಿಸುವ ಬಗ್ಗೆ ಅದನ್ನು ಜಾರಿಗೆ ತರುವ ಬಗ್ಗೆ ಇಲಾಖಾ ವತಿಯಿಂದ ವ್ಯವಸ್ಥೆ ಮಾಡಬೇಕು. ಈಗಾಗಲೇ ತಮ್ಮ ಇಲಾಖೆಯಿಂದ ಈ ರಸ್ತೆಗಳಲ್ಲಿ 15 ಅಪಘಾತಗಳ ಜೋನ್ ಅನ್ನು ಗುರುತು ಮಾಡಿ ಕೊಟ್ಟಿದ್ದು, ಅದು ಜಿಲ್ಲಾಧಿಕಾರಿಗಳ ಮುಖಾಂತರ ತಮ್ಮ ಅಂದರೆ ಸರಕಾರದ ಗಮನಕ್ಕೆ ಬಂದಿದೆ. ಈ ಕರ್ನಾಟಕ ಪಾಲಿಟೆಕ್ನಿಕ್ ಹತ್ತಿರ, ಕೊಟ್ಟಾರ ಚೌಕಿ ಹತ್ತಿರ ಬೈಕಂಪಾಡಿ ಬ್ರಿಡ್ಜ್‌ನ ಹತ್ತಿರ ಹೊನ್ನ ಕಟ್ಟೆ ಹತ್ತಿರ, ಹೊಸ ಬೆಟ್ಟು ಹತ್ತಿರ, ಕಡಪನಂದೂರಿನ ಹತ್ತಿರ, ಕೊಲ್ನಾಡು ಹತ್ತಿರ, ಕಾರ್ನಾಡು ಹತ್ತಿರ ಮುಲ್ಕಿ ಬ್ರಿಡ್ಜನ ಹತ್ತಿರ ಪಡುಬಿದ್ರೆ ಬ್ರಿಡ್ಜಿನ ಹತ್ತಿರ, ನಾಲ್ಕು ಬೈಪಾಸ್ ಹತ್ತಿರ ಈ ರೀತಿ 15 ಅಪಘಾತಗಳ ಜೋನ್‌ಗಳನ್ನು ಸರಕಾರದ ಗಮನಕ್ಕೆ ತಂದಿದ್ದಾರೆ. ಆದರೆ ಸರಕಾರ ಈ ಆಕ್ಸಿಡೆಂಟ್‌ಗಳನ್ನು ನಿಯಂತ್ರಣ ಮಾಡುವುದಕ್ಕೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತದೆ. ಜನರನ್ನು ದಿವಸವೂ ಕೊಲ್ಲುತ್ತಿರುತ್ತಿರೋ? ಅಥವಾ ಇದನ್ನು ತಡೆಯುವುದಕ್ಕೆ ಪರ್ಯಾಯ ವ್ಯವಸ್ಥೆ ಮಾಡುತ್ತೀರೋ? ಎಂದು ಸರಕಾರದವರಲ್ಲಿ ವಿನಂತಿಸುತ್ತಿದ್ದೇನೆ. ಇದನ್ನು ಗಂಭೀರವಾಗಿ ಪರಿಗಣಿಸಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಾರಿಗೆ ಸಚಿವರು):- ಮಾನ್ಯ ಅಧ್ಯಕ್ಷರೆ, ನಾನು ದಕ್ಷಿಣ ಕನ್ನಡ ಜಿಲ್ಲೆಗೆ ಭೇಟಿ ಕೊಟ್ಟಂತಹ ಸಂದರ್ಭದಲ್ಲಿ ವಿಶೇಷವಾಗಿ ರಾಷ್ಟ್ರೀಯ ಹೆದ್ದಾರಿಗಳಲ್ಲಿ, ರಾಜ್ಯದ ಹೆದ್ದಾರಿಗಳಲ್ಲಿ ಅಪಘಾತಗಳ ಸಂಖ್ಯೆ ಹೆಚ್ಚಾಗುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆ. ಪೋಲೀಸ್ ಇಲಾಖೆ ಲೋಕೋಪಯೋಗಿ ಇಲಾಖೆ, ಮೋಟಾರು ವಾಹನ ಇಲಾಖೆ ಈ ಮೂರು

ಇಲಾಖೆಗಳಿಂದ ಒಂದು ಸಮಗ್ರವಾಗಿರತಕ್ಕಂತಹ ಕಾರ್ಯಕ್ರಮವನ್ನು ರೂಪಿಸತಕ್ಕಂಥಾದ್ದು ಅಷ್ಟೇ ಅಲ್ಲ, ಇದನ್ನು ಕಡಿಮೆ ಮಾಡಲಿಕ್ಕೆ ತಾತ್ಕಾಲಿಕವಾಗಿ ಹಾಗೂ ಶಾಶ್ವತವಾದ ಪರಿಹಾರ ಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಅದನ್ನು ನಾವು ತೆಗೆದುಕೊಳ್ಳುತ್ತಿದ್ದೇವೆ. ಈಗಾಗಲೇ ಕ್ರಮ ತೆಗೆದುಕೊಂಡಿದ್ದೇವೆ. ಉಡುಪಿ ಮಂಗಳೂರು ಮಧ್ಯೆ ಇರತಕ್ಕಂತಹ ರಸ್ತೆಯನ್ನು 4 ಲೈನ್ ರಸ್ತೆಯನ್ನಾಗಿ ಮಾಡಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳಿಂದ ಪ್ರಧಾನ ಮಂತ್ರಿಗಳಿಗೆ ಪತ್ರ ಬರೆಸಿದ್ದೇನೆ. ಇದಲ್ಲದೆ ಈ ಮೂರು ಇಲಾಖೆಗಳನ್ನು ಸಮನ್ವಯ ಮಾಡಿ, ರಾಜ್ಯದಲ್ಲಿ ರೋಡ್ ಸೇಫ್ಟಿ ಸಮಿತಿ ಇದೆ, ಅದಕ್ಕೆ ನಾನೇ ಅಧ್ಯಕ್ಷನಿದ್ದೇನೆ ಕ್ರಮ ತೆಗೆದುಕೊಳ್ಳುತ್ತೇನೆ.

ಈ. ಶಿವಮೊಗ್ಗ ಜಿಲ್ಲೆಯಲ್ಲಿ ಅಧಿಕಾರಿಗಳಿಂದ ಬ್ರಿಟೀಷ್ ಕಾಲದ ಆದೇಶ ಜಾರಿ.

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ):- ಮಾನ್ಯ ಅಧ್ಯಕ್ಷರೆ, ಶಿವಮೊಗ್ಗ ಜಿಲ್ಲೆಯ ಒಂದು ವಿಚಿತ್ರವಾದಂಥ ಸಮಸ್ಯೆಯನ್ನು ತಮ್ಮ ಮೂಲಕ ಸರಕಾರದ ಗಮನಕ್ಕೆ ತರುತ್ತಿದ್ದೇನೆ. ಬ್ರಿಟೀಷ್ ಕಾಲದ ಸರಕಾರೀ ಆದೇಶವನ್ನು ನಮ್ಮ ಅಧಿಕಾರಿಗಳು ಈಗ ಶಿವಮೊಗ್ಗ ಜಿಲ್ಲೆಯಲ್ಲಿ ಜಾರಿಗೆ ತರುತ್ತಿದ್ದಾರೆ. ಬ್ರಿಟೀಷ್ ಕಾಲದಲ್ಲಿ 1921, 1928-1931ನೇ ಇಸವಿಯಲ್ಲಿ ಬ್ರಿಟೀಷ್ ಸರಕಾರ ಒಂದು ಆದೇಶ ಹೊರಡಿಸಿತ್ತು. ಶಿವಮೊಗ್ಗ ಜಿಲ್ಲೆಯ ಮಲೆನಾಡು ತಾಲ್ಲೂಕಿನ ಸಾಗರ, ತೀರ್ಥಹಳ್ಳಿ, ಮತ್ತು ಹೊಸನಗರ ತಾಲ್ಲೂಕಿನ ಕೆಲವು ಜಮೀನುಗಳನ್ನು ಅರಣ್ಯ ಜಮೀನುಗಳನ್ನಾಗಿ ಪರಿವರ್ತನೆ ಮಾಡಲಿಕ್ಕೆ ಆದೇಶ ಹೊರಡಿಸಿತ್ತು. ಆ ಆದೇಶವನ್ನು ಆವತ್ತಿನಿಂದ ಇವತ್ತಿನವರೆಗೂ ಜಾರಿಗೆ ತರಲಿಲ್ಲ ಅದು ಹಾಗೆಯೇ ಇತ್ತು. ರೆವಿನ್ಯೂ ದಾಖಲಾತಿಗಳಲ್ಲಿ ಅರಣ್ಯವೆಂದು ನಮೂದು ಆಗಿರಲಿಲ್ಲ.

12.00 ಪಿ.ಎಂ

ಆದರೆ ಅದೇ ಜಮೀನನ್ನು ಸ್ವತಂತ್ರ ಭಾರತದಲ್ಲಿರುವ ಈ ಸರ್ಕಾರ, ಹಿಂದಿನ ಸರ್ಕಾರ ಅಲ್ಲಿರುವ ರೈತರಿಗೆ ಭೂ ಮಂಜೂರಾತಿಯನ್ನು ಮಾಡಿದೆ. ಕೆಲವು ಸರ್ಕಾರಿ ಕಟ್ಟಡಗಳು ಇವೆ, ಊರುಗಳು ನಿರ್ಮಾಣವಾಗಿದೆ. ಅನೇಕ ಜನ ರೈತರು ಬಗರ್‌ಹುಕುಂ ಮಾಡಿದ್ದಾರೆ. ಅಂಥ ರೆವಿನ್ಯೂ ಜಮೀನನ್ನು ಈಗ ನಮ್ಮ ಶಿವಮೊಗ್ಗ ಜಿಲ್ಲೆಯ ಅರಣ್ಯಾಧಿಕಾರಿಗಳು ಮತ್ತು ರೆವಿನ್ಯೂ ಅಧಿಕಾರಿಗಳು ಕಛೇರಿಯಲ್ಲಿ ಕುಳಿತು ಏಕಾಏಕಿ ಎಲ್ಲಾ ಸರ್ವೆ ನಂಬರುಗಳನ್ನು ಅರಣ್ಯ ಎಂದು ಹೇಳಿ ಪರಿವರ್ತನೆ ಮಾಡಿ ರೆವಿನ್ಯೂ ದಾಖಲೆಗಳಲ್ಲಿ ನಮೂದು ಮಾಡುತ್ತಿದ್ದಾರೆ. ಇದರಿಂದ ಸಾಕಷ್ಟು ಕಿರುಕುಳವಾಗಿದೆ. 1982ರಲ್ಲಿ ನಮಗೆ ಜಮೀನು ಮಂಜೂರಾಗಿದೆ. ನಾನು ಮೊನ್ನೆ ಹೋಗಿ ದಾಖಲಾತಿ ತೆಗೆಸಿ ನೋಡಿದರೆ ಈ ವರ್ಷ ಆದೇ ಜಮೀನನ್ನು ಅದು ಅರಣ್ಯ ಎಂದು ಹೇಳಿ ಬರೆದಿದ್ದಾರೆ. ನಾನು ಯಾರಿಗೆ ಅಪೀಲು ಹಾಕಬೇಕು ಎಂದು ಹೇಳಿ ಗೊತ್ತಿಲ್ಲ. ಇಂಥ ಸಾವಿರಾರು ಕುಟುಂಬಗಳು ಇವತ್ತು ಕಣ್ಣೀರು ಹಾಕುತ್ತಿವೆ. ಅದನ್ನು ತಕ್ಷಣ ತಡೆಹಿಡಿಯಬೇಕು. ರೆವಿನ್ಯೂ ಅಧಿಕಾರಿಗಳಿಗೆ ಮತ್ತು ಶಿವಮೊಗ್ಗ ಜಿಲ್ಲೆಯ ಅರಣ್ಯಾಧಿಕಾರಿಗಳಿಗೆ, ಮಾನ್ಯ ಸಚಿವರು ಅದನ್ನು ಹೇಳಿ ತಡೆಹಿಡಿಯಬೇಕು. ಮತ್ತು ಈ ಸಮಸ್ಯೆ ಉಲ್ಬಣಾವಸ್ಥೆಗೆ ಹೋಗದ ಹಾಗೆ ನೋಡಿಕೊಳ್ಳಬೇಕು. ಮತ್ತು ಸರ್ಕಾರ ಮಧ್ಯೆ ಪ್ರವೇಶ ಮಾಡಿ ತತ್‌ಕ್ಷಣ ಪರಿಹಾರ ಮಾಡಲಿಕ್ಕೆ ಕಾರ್ಯ ಪ್ರವೃತ್ತಿ ಮಾಡಬೇಕು. ಈಗಾಗಲೇ ಆಶ್ರಯ ಮತ್ತು ಬೇರೆ ಬೇರೆ ಯೋಜನೆಗಳಲ್ಲಿ ಸೈಟುಗಳನ್ನು ಹಂಚಿದ್ದಾರೆ ಮತ್ತು ರೆವಿನ್ಯೂ ಮೂಲಕ ಭೂ